Statement of the Minister of Agriculture and Forest

[*Re .–Soil Conservations works in Security Districts of the State*]

† ಶ್ರೀ ಕೆ ಎಚ್ ಪಾಟೀಲ್.— (ಅರಣ್ಯ ಮಂತ್ರಿ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು)

ಮಾನ್ಯ ಸದಸ್ಯರು ಈ ವರೆಗೆ ಮಾಡಿದ ಸಲಹೆಗಳನ್ನು ಮತ್ತು ಅವರ ಭಾವನೆಗಳನ್ನೂ ಸರ್ಕಾರ ಸಂಪೂರ್ಣವಾಗಿ ಗಮನಿಸಿದೆ. ಈ ಸಲ ಭೀಕರವಾದಂಥ ಬರಗಾಲ ಬಂದಿದೆ ಎನ್ನುವ ಮಾತಿನೊಳಗೆ ಸರ್ಕಾರ ತಮ್ಮೊಂದಿಗೆ ಒಂದೇ ಅಭಿಪ್ರಾಯವನ್ನು ಹೊಂದಿದೆ ;ಎಂಬುದನ್ನು ಮಾನ್ಯ ನಾಯಕರು ಅನೇಕ ಸಲ ಹೇಳಿದ್ದಾರೆ. ಸರ್ಕಾರ ಎಷ್ಟು ಉಗ್ರತರವಾಗಿ ಕೆಲಸಕಾರ್ಯಗಳನ್ನು ನಡೆಸಿದೆ ಎನ್ನುವುದು ಪ್ರತಿಯೊಬ್ಬ

ಸದಸ್ಯರಿಗೂ ಗೊತ್ತಿರುವ ವಿಷಯವಾಗಿದೆ. ಮಾನ್ಯ ಸದಸ್ಯರಾದ ವಿಶ್ವನಾಥ ರೆಡ್ಡಿಯವರು, ಬಾಪೂ ಗೌಡರು ಅಲ್ಲಿ ಹೆಚ್ಚು ಕಾರ್ಯ ಆಗಬೇಕು. ಅಲ್ಲಿ ಕೆಲಸಗಾರರು ಕಾರ್ಯ ಇಲ್ಲದೆ ಇದ್ದಾರೆ ಎಂದು ಹೇಳಿದರು ಸಾಯಿಲ್ ಕನ್ಸರ್ವೇಷನ್ ಕೆಲಸ ಇನ್ನೂ ವೇಗವಾಗಿ ನಡೆಯಬೇಕು ಎಂದು ಹೇಳಿದ್ದಾರೆ. ಸರ್ವೆ ವರ್ಕ್ ಒಂದು ಸ್ಪೆಷಲೈಸ್ಡ್ ವರ್ಕ್ ಆಗಿರುವುದರಿಂದ ಒಂದೆರೆಡು ದಿವಸ ಬಂದ್ ಆಗುತ್ತದೆ. ಹಸಿವೆಯಿಂದ ಬಳಲುತ್ತಿರುವ ಜನಕ್ಕೆ ಬಂದ್ ಆದಾಗ ಜೊಬ್ಬೆ ಮಾಡುವುದು ಸಹಜವಾಗಿದೆ. ನಾನು ಇದನ್ನು ಹೇಳುವಾಗ ಸರ್ಕಾರ ಏನನ್ನೂ ಮಾಡದೆ ಕಣ್ಣುಮುಚ್ಚಿಕೊಂಡು ಕೂತಿರುತ್ತದೆ ಎಂದು ಯಾರು ತಿಳಿಯಬಾರದು. ಪ್ರತಿದಿವಸ ಎಷ್ಟು ಜನ ಗ್ರಾಜುಯೇಟ್ಸ್ ಸಿಕ್ಕುತ್ತಾರೆ ಅವರೆಲ್ಲರನ್ನೂ ಎಂಪ್ಲಾಯ್ ಮಾಡುವ ಕಾರ್ಯಕ್ರಮತೆಗೆದುಕೊಂಡಿದ್ದೇವೆ. ಸುಮಾರು ೩೬೦ ಡಿಪ್ಲೋಮೋ ಹೋಲ್ಡರ್ಸ್ ಬಂದಿದ್ದರು, ಅವರಿಗೆ ನಾವು ಸಾಯಿಲ್ ಕನ್ಸರ್ವೇಷನ್ ವರ್ಕ್‌ಗೆ ಬರುತ್ತೀರಾ ಇಷ್ಟು ಜನರನ್ನೂ ಇವತ್ತೇ ಅಪಾಯಿಂಟ್ ಮಾಡುತ್ತೇವೆ ಎಂದು ಹೇಳಿದೆವು. ಆದರೆ ಅವರು ಸೂರ್ಯನ ಕೆಳಗೆ ಹೋಗಿ ಕೆಲಸಮಾಡುವುದಕ್ಕೆ ಸಿದ್ಧ ಇಲ್ಲ, ಕಾಗದದೊಳಗೆ ಮೂಡುವ ಪಿಡಬ್ಲ್ಯೂಡಿ ಕೆಲಸ ಬೇಕು ಎಂದು ಕೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಅವರು ಎಲ್ಲಿಗೆ ಹೋಗುತ್ತಾರೆ ?

ಶ್ರೀ ಕೆ ಎಚ್ ಪಾಟೀಲ್ — ಗ್ರಾಜುಯೇಟ್ಸ್ ಇದ್ದರೆ, ಡಿಪ್ಲೋಮೋ ಹೋಲ್ಡರ್ಸ್ ಇದ್ದರೆ ಕೂಡಲೆ ನೇಮಿಸುತ್ತೇವೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ಜನರೂ ಸಹಿತ ಸ್ಕೀರ್ಸಿಟಿ ಏರಿಯಾಕ್ಕೆ ಹೋಗಿ ಹೆಚ್ಚು ಕೆಲಸ ಮಾಡುವುದಕ್ಕೆ ಹತ್ತಿದ್ದಾರೆ.

ಶ್ರೀ ಕೊಣಂದೂರು ಲಿಂಗಪ್ಪ .— ಅವರಿಗೆ ದಿವಸವೂ ಸಂಬಳ ಕೊಡುವುದು ಮುಖ್ಯ.

ಶ್ರೀ ಕೆ ಹೆಚ್ ಪಾಟೀಲ್ .— ಸಂಬಳ ಸಹಿತ ಯಾರಿಗೂ ತೊಂದರೆಯಾಗದಂತೆ ಕೊಡುತ್ತೇವೆ ಸಾಯಿಲ್ ಕನ್ಸರ್ವೇಷನ್ ವರ್ಕ್‌ನೊಳಗೆ ತೊಂದರೆಯಾಗುತ್ತದೆ ಎನ್ನುವ ಕೂಗು ಎಲ್ಲೂ ಇಲ್ಲ.

ಶ್ರೀ ವಿ ಎನ್ ಪಾಟೀಲ್ .— ಒಂದು ವಾರ ದೊಳಗೆ ಎಲ್ಲೂ ಸಂಬಳ ಸಿಕ್ಕುತ್ತ ಇಲ್ಲ ಸಂಬಳ ಕಡಿಮೆ ಇದೆ.

ಶ್ರೀ ಎಸ್ ವೈ ಪಾಟೀಲ್ .—ಸಂಬಳ ಕೊಡಲಿಕ್ಕೆ ಟೆಕ್ನಿಕಲ್ ಹ್ಯಾಂಡ್ಸ್ ಅನ್ನು ನೆಸೆಸಿಟಿ ಇಲ್ಲ.ಇವರ ಡಿಪ್ಲೊಮೋ ಹೋಲ್ಡರ್ಸ್, ನಿಮ್ಮ ಬಂಡಿಂಗ್ ಡಿಪಾರ್ಟ್‌ಮೆಂಟಿನವರು ಇವರನ್ನು ತೆಗೆದುಕೊಳ್ಳುವುದಿಲ್ಲ. ಬೇಕಾದರೆ, ನಿಮ್ಮ ಡಿವಿಷನಲ್ ಕಮಿಷನರ್ ಅವರಿಗೆ ಫೋನ್ ಮಾಡಿ ಕೇಳಿರಿ. ಅಲ್ಲ ಸಂಬಳ ಕೊಡುವುದಕ್ಕೆ ಮೆಟ್ರಿಕ್ ಪಾಸ್ ಮಾಡಿದ ಜನ ನಡೆಯುತ್ತದೆ. ಸರ್ವೆ ವರ್ಕ್ ಮಾಡುವುದಕ್ಕೆ ಟೆಕ್ನಿಕಲ್ ಹ್ಯಾಂಡ್ಸ್ ಬೇಕಾಗುತ್ತದೆ. ಅದಕ್ಕೆ ಈ ಮೆಟ್ರಿಕ್ ಆದವರನ್ನು ಪಗಾರ್ ಕೊಡಲಿಕ್ಕೆ ಹಚ್ಚಿರಿ.

ಶ್ರೀ ಡಿ ದೇವರಾಜ್ ಅರಸ್ .— ಈಗ ಅಲ್ಲಿಯ ಜನಗಳಿಗೆ ವಾರಕ್ಕೆ ಒಂದು ಸಾರಿ ಸಂಬಳ ಕೊಡುತ್ತಾ ಇರುವುದು ಕೆಲವು ಸದಸ್ಯರು ಅವರಿಗೆ ದಿನವೂ ಸಂಬಳ ಕೊಡಿ ಎಂದು ಸಲಹೆ ಮಾಡುತ್ತಿದ್ದಾರೆ. ಇದರ ಸಾಧ್ಯತೆಗಳು ಏನು ಇದೆ ಅದನ್ನು ಪರೀಕ್ಷೆ ಮಾಡಿ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರ ಸಲಹೆಯನ್ನು ಆಗಲೇ ಗಮನಿಸಿದ್ದೇವೆ. ಈ ಡಿಪ್ಲೊಮೋ ಹೋಲ್ಡರ್ಸ್‌ನ್ನು ಮೆಟ್ರಿಕ್ ಆದವರನ್ನು ಬೈಫರ್‌ಕೇಟ್ ಮಾಡಿ ವರ್ಕ್ ಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದನ್ನು ಗಮನಿಸಲಾಗಿದೆ.
We want to implement this wherever it is possible

ನಾನು ಹೇಳುವುದನ್ನು ತಾವು ಶಾಂತತೆಯಿಂದ ಕೇಳಿಬೇಕು. ನಾವೂ ನೀವೂ ಸೇರಿ ಬೇಕಾದ್ದು ಮಾಡುತ್ತಿದ್ದೇವೆ. ಬೇಕಾದರೆ ನಿಮಗೆ ಒಂದೊಂದೂ ತಾಲ್ಲೂಕಿನ ಜವಾಬ್ದಾರಿ ವಹಿಸೋಣ. ಹೋಗಿ ಮಾಡಿ. ಅದಕ್ಕೂ ನಿಮಗೆ ಸಮಾಧಾನವಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಶ್ರೀ ವಸಂತ್ ಪಾಟೀಲರು ಹೇಳಿದಹಾಗೆ ವಾರಕ್ಕೊಂದು ದಿವಸ ಕೂಲಿ ಸಿಕ್ಕುತ್ತದೆಯೇ ಹೊರತು ದುಡಿ ಸಿಕ್ಕುವುದಿಲ್ಲ. ಬಿದರೆ, ಗುಲ್ಬರ್ಗಾ ಮತ್ತು ಅನೇಕ ತಾಲ್ಲೂಕು ಕಾರ್ಯಕರ್ತರ ಬಳಿಗೆ ನೇರವಾಗಿ ಹೋಗಿ ಯಾವರೀತಿ ಕೂಲಿ ತೆಗೆದುಕೊಂಡರೆ ಅನುಕೂಲ ಎಂದು ಕೇಳಿದಾಗ ಅವರು ವಾರಕ್ಕೊಂದು ಸಲ ಕೊಟ್ಟರೆ ಸಾಕು, ಅದಕ್ಕಿಂತ ಹೆಚ್ಚು ಕಾಲದ ಬಳಿಕ ಕೊಟ್ಟರೆ ತೊಂದರೆಯಾಗುವುದು ಎಂದು ಹೇಳಿದ್ದಾರೆ ಆದರೆ ತಕರಾರು ಬರುವುದು ಯಾವಾಗ ಅಂದರೆ ವಾರಕ್ಕೆ ಎರಡು ದಿವಸ ಕೆಲಸ ಬಂದುವಾಡಿದಾಗ, ಕೆಲಸ ನಿಲ್ಲಿಸಿದಾಗ ಕೊಳ್ಳುವ ಶಕ್ತಿ ಹೋಗುವುದು ಎಂದು ಹೇಳುತ್ತಿದ್ದಾರೆ. ಆದರೂ ಸಹ ಸಾಯಿಲ್ ಕನಸರ್ವೇಷನ್ ಅಧಿಕಾರಿಗಳಿಗೆ ಸರ್ವಿಸ್ ಮೆಂಟಾಲಿಟಿ ಇರಬೇಕು. ಸೇವಾ ಭಾವನೆಯಿಂದ ಕೆಲಸ ಮಾಡಬೇಕು, ಸಾಧ್ಯವಾದ ಮಟ್ಟಿಗೆ ಕೆಲಸ ಬಂದು ಮಾಡದೆ ಕೆಲಸ ತೆಗೆದುಕೊಳ್ಳಿ ಎಂದು ಹೇಳಿದೆ. ಇದಕ್ಕಿಂತ ಹೆಚ್ಚು ಸರಕಾರ ಮಾಡುವುದಕ್ಕೆ ಸಾಧ್ಯವಿಲ್ಲ.

ಗ್ರಾಜುಯೇಟ್ ಕೆಲವು ಸಂದರ್ಭಗಳಲ್ಲಿ ಬೇಕಾಗಿಲ್ಲ, ಕೆಲವು ಕೆಲಸಗಳನ್ನು ಮೆಟ್ರಿಕ್ಯುಲೇಟ್ ಮಾಡಬಹುದು ಎಂದು ಶ್ರೀ ಎಸ್. ವೈ. ಪಾಟೀಲರು ಹೇಳಿದರು. ಸರ್ವೆ ಕೆಲಸವಾದರೆ ತಾನೆ ಮೆಟ್ರಿಕ್ಯುಲೇಟಿಗೆ ಕೆಲಸ ಕೊಡಿಯುವುದು? ಮೊದಲು ಸರ್ವೆಯಾಗಬೇಕು, ಅದಕ್ಕೆ ಸರ್ವೇಯವರು ಬೇಕು, ಕೂಲಿ ಕೊಡುವುದು ಸರ್ವೇಷೀಟ್ ತಯಾರಾದಮೇಲೆ. ಸರ್ವೇಷೀಟು ತಯಾರಿಸುವ ಹಿಬ್ಬಂದಿ ಕೊರತೆಯಿದೆ. ಸರ್ವೆಯಾದಮೇಲೆ ತಡವಾಗುವುದಿಲ್ಲ. ಸರ್ವೆ ಕೆಲಸಕ್ಕೆ ಎಷ್ಟು ಜನ ಬಂದರೂ ತೆಗೆದುಕೊಳ್ಳುತ್ತೇವೆ. ಈಗ ಮೂರು ಜೆಪ್ಯುಟಿ ಡೈರೆಕ್ಟರುಗಳಿದ್ದಾರೆ. ಜಾಯಿಂಟ್ ಡೈರೆಕ್ಟರನ್ನು ಸಹ ಸ್ಪೆಷಲ್ಲಾಗಿ ಹಾಕಿದ್ದೇವೆ. ಕೆಲವರು ವರ್ಗ ಮಾಡಿದರೆ ಹಾಕಿದ ಕಡೆಗೆ ಹೋಗುವುದಿಲ್ಲ ಮಾನ್ಯ ಸದಸ್ಯರು ಕೆಲವರು ವರ್ಗಬೇಡ ಎಂದು ಹೇಳುವರು. ಆದುದರಿಂದ ಎಲ್ಲರಿಗೂ ವಿನಂತಿ ಮಾಡುವುದು ಯಾರೂ ಹಾಗೆ ಮಾಡಬಾರದು, ಎಲ್ಲರೂ ಸಹಕರಿಸಬೇಕು ಎಂದು. ತೀವ್ರವಾಗಿ ಅನುಕೂಲವಾಗಬೇಕಾದರೆ ಎಲ್ಲರ ಸಹಾಯ ಸಹಕಾರಬೇಕು. ಈಗಾಗಲೆ ಆರ್ಡರು ಮಾಡಿ ಮೂರು ನಾಲ್ಕು ದಿವಸಗಳಲ್ಲಿ ವರ್ಗ ಮಾಡಿರುವವರು ಹಾಕಿರುವ ಸ್ಥಳಕ್ಕೆ ಹೋಗದಿದ್ದರೆ ಅವರನ್ನು ಸಸ್ಪೆಂಡ್ ಮಾಡಬೇಕೆಂದು ಡೈರೆಕ್ಟರಿಗೆ ತಿಳಿಸಿದ್ದೇವೆ. ಸಾಧ್ಯವಾದಷ್ಟು ಹೆಚ್ಚು ಕೆಲಸ ಸಾಯಿಲ್ ಕನಸರ್ವೇಷನಿಗೆ ಸಂಬಂಧಪಟ್ಟಂತೆ ಮಾಡುತ್ತೇವೆ.

ಉಳಿದ ವಿಷಯಗಳ ಬಗ್ಗೆ ಮುಖ್ಯ ಮಂತ್ರಿಗಳು ಅನೇಕ ಸಲ ಹೇಳಿದ್ದಾರೆ, ಅದರಲ್ಲಿ ಬದಲಾವಣೆ ಇಲ್ಲ. ವಿರೋಧ ಪಕ್ಷದ ನಾಯಕರು ಉದಾರ ರೀತಿಯಿಂದ ಯೋಗ್ಯವಾದ ಕ್ರಮಗಳನ್ನು ಸಲಹೆ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆ ವಿಮರ್ಶೆಮಾಡುವಾಗ ವರದಿ ಬರುತ್ತದೆ, ನೋಡೋಣ. ಅದಲ್ಲದೆ ರಾಯಚೂರು ಡಿ.ಸಿ ವರದಿಬೇಕು ಎಂದು ಹೇಳಿದ್ದಾರೆ. ತರಿಸೋಣ. ಅರ್ಮೂರ್ ವರದಿ ಮತ್ತು ಡಿ.ಸಿ ವರದಿ ಈ ಎರಡೂ ಕೂಡ ಪರಿಶೀಲನೆ ಮಾಡಿದರೆ ನಮಗೆ ಅನುಕೂಲವಾಗುವುದು. ಮಾಟಾಳ್ ನಾಗರಾಜ್‌ರವರು ಹೇಳಿದರು ಸತ್ಯ ಹೆಣ ತಂದು ಹಾಕಿದರು ಎಂದು ಅವರೇಕೆ ಸತ್ಯರು ಎಂಬುದನ್ನು ತಿಳಿಯಲು ಪೋಸ್ಟ್‌ಮಾರ್ಟಂ ನಡೆಯುತ್ತಿದೆ. ಅದರ ವರದಿ ಬರಬೇಕು. ಅದಕ್ಕೆ ಮುಂಚೆ ಆ ವಿಚಾರ ಪ್ರಸಾಪ ಮಾಡುವುದು ಬೇಡ. ವರದಿ ಬಂದಮೇಲೆ ಅದನು ಪರಿಶೀಲಿಸೋಣ.

ಶ್ರೀ ಮಾಟಾಳ್ ನಾಗರಾಜ್.—ವರದಿ ಬರುವವರೆಗೆ ಅನೇಕರು ಸತ್ತಿರುವರು.

ಶ್ರೀ ಕೆ. ಹೆಚ್. ಪಾಟೀಲ್.—ನಾವು ನಮ್ಮ ಕೈಲಾದ್ದನ್ನು ಮಾಡಬಹುದು, ಮನುಷ್ಯಮಾತ್ರದವ ರೇನು ಮಾಡಬಹುದೋ ಅದನ್ನೆಲ್ಲಾ ಮಾಡುತ್ತಿದ್ದೇವೆ. ಈಗಿನ ಸರಕಾರ ಬಡವರ ಹಿತ ರಕ್ಷಿಸಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತದೆ.

ಶ್ರೀ ವೈ. ಎಸ್. ಪಾಟೀಲ್.—ವಾರದಲ್ಲಿ ಒಂದು ದಿವಸ ಬಂದಾಗಿಲ್ಲ, ಮೂರು ದಿವಸ ಕೆಲಸ ನಡೆಯುವುದಿಲ್ಲ, ಕೆ ವಿವಸ ನಡೆಯುತ್ತದು ಎಂಬ ದೂರಿದೆ, ಬೇಕಾದರೆ ತೋರಿಸಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅನೇಕ ದೂರುಗಳಿವೆ, ಕೂಲಿ ಸರಿಯಾಗಿ ಕೊಡುತ್ತಿಲ್ಲ ಎಂದು ಕೆಲವು ಕಡೆ ಹೇಳುವರು. ಇತ್ತೀಚೆಗೆ ಎಲ್ಲಿಗೆ ಎಷ್ಟು ಕೊಡಬೇಕೆಂದು ಪ್ರಿಂಟ್ ಮಾಡಿಸಿದ್ದಾರೆ, ಅದನ್ನು ತಳಿಸಿ ಕೊಡುತ್ತೇನೆ, ಬಿದರೆ ಜಿಲ್ಲೆಯ ಕೆಲಸ ಮತ್ತು ಯಾವಗಿರಿ ವಿಭಾಗದ ಬಗ್ಗೆ ಪ್ರಿಂಟ್ ಆಗಿದೆ. ಅದರ ಪ್ರಕಾರ ಹೇಳುತ್ತೇನೆ. ಬಿದರೆಯಲ್ಲಿ ನಡೆಯುವ ಅನಾವ ಕಾಮಗಾರಿಯಲ್ಲಿ ಸರಿಯಾದ ಕೂಲಿ ಕೊಡುತ್ತಿಲ್ಲ

ಶ್ರೀ ಎಂ. ಎಸ್. ಕೃಷ್ಣನ್

ಎಂಬ ದೂರಿದೆ. ಬಿದರೆಯಲ್ಲೇ ಒಂದು ರೀತಿಯಿದೆ, ಯಾದಗೀರ ವಿಭಾಗದಲ್ಲೇ ಒಂದು ರೀತಿ ಇದೆ ಎಂದೂ ಅದರಿಂದ ಕೆಲಸ ನಿಧಾನವಾಗಿದೆ ಎಂಬ ದೂರಿದೆ. ಹಾಗಿದ್ದರೆ ಎಲ್ಲ ಕಡೆಯೂ ಸರಿಯಾದ ದರ ಕೊಡಬೇಕು. ಹೀಗೆ ಬಿದರೆ ಜಿಲ್ಲೆಯಲ್ಲಿ ಒಂದು ರೀತಿಯಲ್ಲಿ ಕೂಲಿ ಯಾದಗಿರಿಯಲ್ಲಿ ಇನ್ನೊಂದು ರೀತಿ ಕೊಡುವುದೆಕೆ ? ಒಂದೇ ಕೆಲಸಕ್ಕೆ ಹೀಗೆ ಮಾಡುವುದು ಸರಿಯಲ್ಲ. ನೂರು ಘನ ಅಡಿಗೆ ಒಂದು ಕೆಲಸಕ್ಕೆ ಯಾದಗಿರಿಯಲ್ಲಿ ಎರಡೂವರೆ ರೂಪಾಯಿ ಕೊಡುವಾಗ ಬಿದರೆಯಲ್ಲಿ ೩ ರೂಪಾಯಿ ಕೊಡುವರು. ಇದನ್ನು ಗಮನಿಸಿ ಎಲ್ಲಾ ಕಡೆಯೂ ಒಂದೇ ರೀತಿಯ ಕೆಲಸಕ್ಕೆ ಒಂದೇ ರೀತಿಯ ಕೂಲಿ ಕೊಡಲು ವ್ಯವಸ್ಥೆಮಾಡಬೇಕು.

ದೇವರಾಜ್ ಅರಸ್.—ಬಿದರೆಯಲ್ಲಿ ಹಾರ್ಡ್‌ಸಾಯಿಲ್ ಇರುವುದರಿಂದ ಜಾಸ್ತಿ ಕೊಡುವರು ಹೀಗೆ ಏನೇನೋ ಹೇಳುತ್ತಾ ಹೋದರೆ ಗೊತ್ತುಮಾಡಿರುವ ಕಾರ್ಯಕಲಾಪವು ಸರಿಯಾಗಿ 3 P.M. ನಡೆಯುವುದು ಹೇಗೆ?

ಶ್ರೀ ವಿ. ಎಸ್. ಪಾಟೀಲ್.—ಅಧ್ಯಕ್ಷರೇ ನಾನು ಈಗಾಗಲೇ ಮೂರು ಸಾರ್ತಿ ಎದ್ದು ಕುಳಿತೆ

ಅಧ್ಯಕ್ಷರು.—ಆರ್ಮಿಗಂ ಸಮಿತಿಯ ವರದಿ ಬಂದಮೇಲೆ ವಿಷಯಗಳನ್ನು ತಾವು ಎಷ್ಟು ಬೇಕಾದರೂ ಚರ್ಚೆಮಾಡುವುದಕ್ಕೆ ಅವಕಾಶವಿದೆಯಲ್ಲ....

ಶ್ರೀ ವಿ. ಎಸ್. ಪಾಟೀಲ್.—ನಾನು ಹೇಳಬೇಕೆಂದಿರುವುದು ಇಷ್ಟೆ. ಅಲ್ಲಿ ಕೆಲವು ಜಾಗದಲ್ಲಿ ಒಂದೆರಡು ವಿಜಾಗಳು ಕೆಲಸ ಮಾಡದೆ ನಿಲ್ಲಿಸಿದರೂ ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಸರ್ಕಾರದವರು ಈ ಸಂದರ್ಭದಲ್ಲಿ ಎಲ್ಲಿಯೇ ಆಗಲಿ ಕೆಲಸವನ್ನು ಮೂರುದಿನಕ್ಕೆ ಜಾಸ್ತಿಯಾಗಿ ನಿಲ್ಲಿಸಬಾರದೆಂದು ಒಂದು ಆಜ್ಞೆ ಹೊರಡಿಸುವಂತೆ ಮಾಡಲಿ ಎಂದು ಹೇಳಿಕೊಳ್ಳುತ್ತೇನೆ,

ಶ್ರೀ ಡಿ. ದೇವರಾಜ ಅರಸ್.—ನಾನು ಈ ಹಿಂದೆಯೇ ಹೇಳಿದಂತೆ ಈ ಸಾಯಿಲ್ ಕನ್‌ಸರ್ವೇಷನ್ ಕೆಲಸದಲ್ಲಿ ಸ್ವಲ್ಪ ನಿಧಾನವಾಗಿದೆ. ಅದನ್ನು ಒಪ್ಪಿಕೊಂಡಿದ್ದೇನೆ, ಇನ್ನು ಮುಂದಕ್ಕೆ ಎಲ್ಲಾ ಕಡೆಗಳಲ್ಲೂ ಸಾಯಿಲ್ ಕನ್‌ಸರ್ವೇಷನ್ ಕೆಲಸವನ್ನು ಹೆಚ್ಚು ಹೆಚ್ಚು ಮಂಟ್ಟದಲ್ಲಿ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಲಾಗಿದೆ, ತಿಳಿಸಲಾಗಿದ. ಅದಕ್ಕಾಗಿ ಅಲ್ಲಿ ಅಧಿಕಾರಿಗಳ ಅಭಾವ ಇದ್ದ ಕಾರಣ ಅದಕ್ಕೆ ಕೆಲವರನ್ನು ಅಲ್ಲಿಗೆ ವರ್ಗ ಮಾಡಲಾಗಿದೆ, ಇನ್ನು ಕೆಲವರನ್ನು ಕೆಲಸಕ್ಕೆ ಹೊಸದಾಗಿ ನೇಮಕ ಮಾಡಿಕೊಳ್ಳಲಾಗಿದೆ. ಇದಕ್ಕಷ್ಟು ಸಾಕಷ್ಟಾಗಿ ಈಗ ಹೊಸದಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನೋಡಿದರೆ ಅವರಿಗೆ ಎಲ್ಲಾ ವಿಚಾರಗಳಲ್ಲೂ ಎಕ್ಸ್‌ಪರ್ಟ್ ನಾಲೆಡ್ಜ್ ಇದ್ದ ಹಾಗೆ ಹೇಳುತ್ತಿದ್ದಾರೆ. ಅವರು ಒಂದು ಸಂಪೂರ್ಣವಾದ ವರದಿಯನ್ನು ಬರೆದುಕೊಡಲಿ. ನಾವು ಅವರು ಬರೆದಿರುವುದನ್ನೇ ನೋಡಿಕೊಂಡು ಕೆಲಸಗಳನ್ನು ನಡೆಸುತ್ತೇವೆ ಹಿಂದೆ ಆ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಲಕ್ಷ ೫ ಸಾವಿರ ಜನರಿಗೆ ಕೆಲಸ ಒದಗಿಸಲಾಗಿತ್ತು. ಈಗ ಅಲ್ಲಿ ಒಂದು ಲಕ್ಷ ಐವತ್ತು ಸಾವಿರ ಜನರಿಗೆ ಕೆಲಸ ಒದಗಿಸಲಾಗಿದೆ. ಮತ್ತು ಅಪ್ಪರ್ ಕೃಷ್ಣ ನಾಲಾ ಎಲ್ಲೆಲ್ಲಿ ಹೋಗುತ್ತದೋ ಅಲ್ಲಿ ಏಕಕಾಲಕ್ಕೆ ನಾಲ್ಕು ಕಡೆಗಳಲ್ಲಿ ಕೆಲಸ ತೆಗೆದುಕೊಳ್ಳಬೇಕೆಂದು ತಿಳಿಸಿದ್ದೇವೆ. ಆದರೆ ನಮಗೆ ಕೆಲವು ಇನ್‌ಹೆರೆಂಟ್ ತೊಂದರೆಗಳಿವೆ. ಅಂದರೆ ಕಾಲಕ್ಕೆ ಸರಿಯಾಗಿ ಕೆಲವು ಕಡೆ ಜಮೀನನ್ನು ಅಕ್ವೈಯರ್ ಮಾಡುವುದಕ್ಕೆ ಜನರು ಒಪ್ಪುತ್ತಿಲ್ಲ. ವಿರೋಧ ಪಕ್ಷದಲ್ಲಿರತಕ್ಕ ಮಾನ್ಯ ಸದಸ್ಯರುಗಳು ಬಹಳ ಪ್ರಭಾವಶಾಲಿಗಳೆಂದು ಅವರೇ ಹೇಳಿಕೊಳ್ಳುತ್ತಿದ್ದಾರೆ. ದಯಮಾಡಿ ಅವರ ಆ ಸ್ಥಳಕ್ಕೆ ಬಂದು ಜಮೀನನ್ನು ಒಂದು ರಾಜೀ ಒಪ್ಪಂದದ ಪ್ರಕಾರ ಬಿಡಿಕೊಟ್ಟರೆ ಬಹಳ ಅವರಿಂದ ದೇಶಕ್ಕೆ ಉಪಕಾರ ಮಾಡಿದಂತಾಗುತ್ತದೆ. ಇನ್ನು ಇಂಡಿಗಿ ಸಿಂಧಿಗಿ ಗುಲ್ಬರ್ಗಾ ಈ ಪ್ರದೇಶದಲ್ಲಿ ಇಂಜಿನಿಯರುಗಳಿಗೆ ಅಭಾವವಿತ್ತು. ಅಲ್ಲಿಗೆ ಅವರನ್ನು ಈಗ ಹಾಕಲಾಗಿದೆ. ಶ್ರೀ ವಾಟಾಳ್ ನಾಗರಾಜ್ ಅವರು ಅಲ್ಲಿಗೆ ಹೋಗಿ ಸತ್ಯಾಗ್ರಹ ಹೂಡಿ ಏಕೆ ಅನುಕೂಲ ಕಲ್ಪಿಸಿಕೊಡಬಾರದು?

ಶ್ರೀ ವಾಟಾಳ್ ನಾಗರಾಜ್.—ತಾವು ತಮ್ಮ ಪ್ರಭಾವ ಜಾಸ್ತಿ ಇದೆ ಎಂದು ತಮಟೆ ಹೊಡೆದು ಕೊಳ್ಳುತ್ತಿದ್ದೀರಿ...

ಶ್ರೀ ಡಿ. ದೇವರಾಜ ಅರಸ್.—ನಾವು ಎಲೆಕ್ಷನ್ ಕಾಲದಲ್ಲಿ ತಮಟೆ ಹೊಡೆದಿದ್ದಾಯಿತು. ಯಾವಾಗಲೂ ತಮಟೆ ಹೊಡೆಯುವುದು ಅನಾವಶ್ಯಕ. ತಾವು ಈಗ ತಮಟೆ ಹೊಡೆಯಬೇಕಾಗಿದೆ. ಆದರೆ ನಾವು ಸದ್ಯದಲ್ಲೇ ಈ ಸಭೆಯ ಮುಂದೆ ಒಂದು ಮಸೂದೆಯನ್ನು ತರುವವರಿದ್ದೇವೆ. ಆದನ್ನು

ತರತಕ್ಕ ಉದ್ದೇಶ ಈ ದಿನಸ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಪ್ರಕಾರ ಭೂಮಿಯನ್ನು ಜನರಿಂದ ಅಕ್ವೈಯರ್ ಮಾಡುವುದಕ್ಕೆ ಬಹಳ ನಿಧಾನವಾಗುತ್ತಿದೆ. ಅದನ್ನು ತಪ್ಪಿಸಿ ಭೂಮಿಯನ್ನು ೩೦ ದಿನದೊಳಗೆ ಅಕ್ವೈಯರ್ ಮಾಡತಕ್ಕ ರೀತಿಯಲ್ಲಿ ಸಭೆಯ ಒಪ್ಪಿಗೆಗಾಗಿ ಮಸೂದೆಯನ್ನು ತಯಾರಿಸಲಾಗಿದೆ. ಅದು ಸಧ್ಯದಲ್ಲೆ ಇಲ್ಲಿ ಬರುವುದರಲ್ಲಿದೆ.

ಶ್ರೀ ವಿಶ್ವನಾಥ ರೆಡ್ಡಿ.—ಮಾನ್ಯ ಮುಖ್ಯ ಮಂತ್ರಿಗಳು ಇದೇ ಸಭೆಯಲ್ಲಿ ಹೇಳಿದ್ದಾರೆ. ಅರ್‌ಮೊಗಂ —ಒನ್ ಮ್ಯಾನ್ ಕಮಿಷನ್ ರಾಜ್ಯದ ಎಲ್ಲಾ ಕ್ಷಾಮಪೀಡಿತಪ್ರದೇಶಗಳನ್ನೂ ಸುತ್ತಿಕೊಂಡು ಬರುವಂತೆ ಜಿ. ಒ ಮಾಡಲಾಗಿದೆ ಎಂದು. ಆದರೆ ನನಗೆ ಇತ್ತೀಚೆಗೆ ನನ್ನ ಸ್ನೇಹಿತರಾದ ಶ್ರೀ ಶರಣಪ್ಪನವರು ಆ ಶ್ರೀ ಆರ್ಮುಗಂ ಅವರನ್ನು ಕಂಡಾಗ ರಾಯಚೂರು ಜಿಲ್ಲೆಯ ದೇವರ್ಗಿಕೊಪ್ಪಾ ಇತ್ಯಾದಿ ತಾಲ್ಲೂಕ್‌ಗಳ ಅವರ ಪರಿಮಿತಿಯೊಳಗೆ ಬರುವುದಿಲ್ಲ. ಎಂದು ಅವರು ತಿಳಿಸಿದಂತೆ. ಅದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ದಯಮಾಡಿಸಿ ಆ ಒನ್ ಮ್ಯಾನ್ ಕಮಿಷನ್ ಆ ರಾಯಚೂರು ಜಿಲ್ಲೆಯ ದೇವರ್ಗಿ ಮತ್ತು ಕೊಪ್ಪಾಳ ಇತರೇ ತಾಲ್ಲೂಕ್‌ಗಳನ್ನೂ ಕೂಡ ವಿಜಿಟ್ ಮಾಡುವಂತೆ ಆಜ್ಞೆ ಮಾಡುತ್ತೀರಾ. ಅಲ್ಲಿಂಗ ಕೆಲವರು ಇದೇ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕಾಣುವುದಕ್ಕಾಗಿ ಬಂದಿದ್ದಾರೆ. ಆದರೆ ಮುಖ್ಯಮಂತ್ರಿಗಳನ್ನು ಕಾಣುವುದಕ್ಕೆ ತಾಸುಗಟ್ಟಲೆ ಕಾದರೂ ಸಾಧ್ಯವಾಗುವುದಿಲ್ಲವಾದ್ದರಿಂದ ನಾನ ಇದನ್ನು ಸಭೆಯಲ್ಲಿ ಎತ್ತಿದ್ದೇನೆ. ಆ ಸಮಿತಿ ಅಲ್ಲಿಗೂ ಹೋಗುವಂತೆ ಮಾಡಬೇಕೆಂದು ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ ೧೯೫೧ರಲ್ಲೇ ಶಂಖುಸ್ಥಾಪನೆಯಾದ ಆ ಬೋಲಾರ ಅಣೆಕಟ್ಟಿನ...

ಅಧ್ಯಕ್ಷರು.—ಅದರ ಬಗ್ಗೆ ಮಾನ್ಯ ಸದಸ್ಯರು ಒಂದು ನೋಟೀಸನ್ನು ಕಳುಹಿಸಲಿ ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರೇ, ನಾನು ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಒಳಗೊಂಡಂಥ ೩-೪ ಕಾಲ್‌ಅಟೆನ್‌ಷನ್ ಮೋಷನ್‌ಗಳನ್ನು ಕಳುಹಿಸಿದ್ದೆ. ಇಲ್ಲಿಯವರೆಗಾದರೂ ಒಂದಕ್ಕೂ ಉತ್ತರ ಬರಲಿಲ್ಲ....

ಅಧ್ಯಕ್ಷರು. ತಮ್ಮ ಕೆಲವು ಮೊಷನ್‌ಗಳನ್ನು ನಾನು ಅಡ್ಮಿಟ್ ಮಾಡಿದ್ದೇನೆ. ಇನ್ನು ಕೆಲವನ್ನು ಉತ್ತರಕ್ಕಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ.

MYSORE LAND REFORMS (AMENDMENT) BILL

SRI K. PUTTASWAMY.— Madam Speaker, I am greatful to the Chair for the indulgence shown to me in allowing much more time than my speech deserved.

As I promised yesterday, today I would not take more than 15 or 20 minutes. The three points which I would like to deal today are the vowers of the Court *vis-a-vis* the powers of the Tahsildar and Revenue Officers, and amendments relating to the exemptions and schedule. These are the only three points which I would like to touch upon today.

By the proposed, certain powers are sought to be invested in the Tahsildar. I feel the nature of powers that are sought to be invested in the Thasildar are such that they ought to be invested even if the Government wants to invest in the Revenue Officers in officers of much higher rank. The determination of compensation, the determination of